5. ಗಮನ ಸೆಳೆಯುವ ಸೂಚನೆ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಾನೂನುಬಾಹಿರವಾಗಿ ಹೆಚ್ಚು ಹಣವನ್ನು ವಸೂಲು ಮಾಡುತ್ತಿರುವ ಬಗ್ಗೆ.

ಶ್ರೀ ಎ. ರಾಮದಾಸ್:- ಅಧ್ಯಕ್ಷರೇ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ "ಆಶಾಮಂದಿರ" ಮತ್ತು "ಸ್ವಂತ ಮನೆ ಹೊಂದಿ" ಯೋಜನೆಯಡಿಯಲ್ಲಿ ಫಲಾನುಭವಿಗಳಿಂದ ಹೆಚ್ಚು ಹಣವನ್ನು ವಸೂಲು ಮಾಡುತ್ತಿರುವ ಬಗ್ಗೆ ಸನ್ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

+ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರದ ಆದೇಶ ಸಂಖ್ಯೆ ಹೆಚ್‌ಯುಡಿ 30 ಎಂಐಬಿ 87 ದಿನಾಂಕ:23-12-1987ರ ಆದೇಶದಂತೆ ಮಂಜೂರಾತಿ ಪಡೆದ 'ಆಶಾ ಮಂದಿರ' ದ ಯೋಜನೆಯಡಿ ವಿವಿಧ ವರ್ಗಗಳಿಗೆ ಸೇರಿದ 6500 ಮನೆಗಳನ್ನು ವಿತರಿಸಲು ಕ್ರಮ ಕೈಗೊಂಡಿರುತ್ತಾರೆ. ಈ ಪೈಕಿ ಹೆಬ್ಬಾಳು ಮೊದಲನೇ ಹಂತದಲ್ಲಿ ಸಹಾ ಒಟ್ಟು 921 ಮನೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದ್ದು ದಿನಾಂಕ: 16-2-97ರ ಪ್ರಾಧಿಕಾರದ ಪ್ರಕಟಣೆಯಂತೆ ವಿವಿಧ ಕಟ್ಟಡಗಳಿಗೆ ಈ ಕೆಳಕಂಡಂತೆ ದರಗಳನ್ನು ನಿಗಧಿಪಡಿಸಲಾಗಿತ್ತು.

ಕ್ರಮ ಸಂಖ್ಯೆ	ವರ್ಗ	ಕಟ್ಟಡದ ಒಟ್ಟು ಅಳತೆ (ಚ.ಮೀ 1)	ಕಟ್ಟಡದ ಒಟ್ಟು ಬೆಲೆ ರೂ.
1)	ಇಡಬ್ಲ್ಯೂಎಸ್-1	20 X 30 (ನಿವೇಶನ)	6,000-00
2)	-ಅದೇ- -2	20.00 ಚ.ಮೀ	15,000-00
3)	ಎಲ್.ಐ.ಜಿ. -1	25.00 ಚ.ಮೀ	20,000-00
4)	ಎಲ್.ಐ.ಜಿ. -2	30.00 ಚ.ಮೀ	30,000-00
5)	ಎಂ.ಐ.ಜಿ. -1	45.00 ಚ.ಮೀ	60,000-00
6)	ಎಂ.ಐ.ಜಿ. -2	60.00 ಚ.ಮೀ	1,00,000-00
7)	ಹೆಚ್.ಐ.ಜಿ. -ಎ	180.00 ಚ.ಮೀ	2,50,000-00
8)	ಹೆಚ್.ಐ.ಜಿ. -ಬಿ	115.94 ಚ.ಮೀ	2,50,000-00

ಮೇಲ್ಕಂಡ ಪ್ರಕಟಿತ ಬೆಲೆಯನ್ನು ಪ್ರಕಟಣೆಯಲ್ಲಿ ಪ್ರಚುರಪಡಿಸಲಾಗಿದ್ದರೂ ಸದರಿ ಪ್ರಕಟಣೆಯಲ್ಲಿ ಮನೆಗಳ ವಿಸ್ತೀರ್ಣ ಮತ್ತು ಬೆಲೆ ಕೇವಲ ಅಂದಾಜು ಮಾತ್ರ. ಕಟ್ಟಡ ಪೂರೈಸಿದ

ನಂತರ ಒಟ್ಟು ಬೆಲೆಯಲ್ಲಿ ವ್ಯತ್ಯಾಸ ಆಗಬಹುದು ಎಂದು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ.

ಹೆಬ್ಬಾಳು ಮೊದಲನೇ ಹಂತದಲ್ಲಿ ವಿತರಣೆಗೆ ಪ್ರಚುರಪಡಿಸಿದ್ದ 921 ಮನೆಗಳ ಬಾಬ್ತು ಯೋಜನೆಯ ಅಂದಾಜು ವೆಚ್ಚ ರೂ. 2.30 ಕೋಟಿಗಳಾಗಿತ್ತು. ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲು ಕಾನೂನು ರೀತಿ ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್‌ನಲ್ಲಿ ಬೆಲೆಯು ಶೇ 15ರಷ್ಟು ಹೆಚ್ಚಾಗಿದ್ದು, ಟೆಂಡರ್ ಮೇರೆಗೆ ಈ ಯೋಜನೆಗೆ ಒಟ್ಟು 3.65 ಕೋಟಿ ರೂ.ಗಳು ವೆಚ್ಚವಾಗಬೇಕಾಗಿತ್ತು. ಆದರೆ ಈ ಯೋಜನೆಗೆ ಅಂತಿಮವಾಗಿ ಒಟ್ಟು 7.25 ಕೋಟಿ ರೂ.ಗಳು ವೆಚ್ಚವಾಗಿರುತ್ತದೆ.

ಆದರೆ ಪ್ರಕಟಿತ ಬೆಲೆಯನ್ನು ನಿಗಧಿಪಡಿಸುವಾಗ ಸಿವಿಲ್ ಕಾಮಗಾರಿ ವೆಚ್ಚ ಮೇಲ್ವಿಚಾರಣಾ ವೆಚ್ಚ ಶೇ 10, ಬಡ್ಡಿ ಮತ್ತು ನಿವೇಶನ ರಚನೆಯ ವೆಚ್ಚವನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡು ಮನೆಗಳ ಅಂದಾಜು ಬೆಲೆಯನ್ನು ನಿಗಧಿಪಡಿಸಲಾಗಿತ್ತು.

1.40 ಪಿ.ಎಂ.

+ಶ್ರೀ ಎ. ರಾಮದಾಸ್ (ಕೃಷ್ಣರಾಜ):- ಮಾನ್ಯ ಉಪಾಧ್ಯಕ್ಷರೆ, ಕಳೆದ ಬಾರಿ ಇದರ ಬಗ್ಗೆ ಬಹಳ ದೊಡ್ಡದಾಗಿ ಪ್ರಸ್ತಾಪವಾಗಿತ್ತು. 1987ನೇ ಇಸವಿಯಲ್ಲಿನ ರಾಷ್ಟ್ರೀಯ ವಸತಿ ಯೋಜನೆಯಲ್ಲಿ ಕೊಟ್ಟಂಥ ಯೋಜನೆ ಇದು. ಇದೇ ಸರ್ಕಾರ ಇದೇ ಸಭೆಯಲ್ಲಿ 23-12-87ರಲ್ಲಿ ಅಂಗೀಕಾರ ನೀಡಿ, ಯಾವ ಬೆಲೆಗಳಿಗೆ ಮನೆಯನ್ನು ಕೊಡಬೇಕಾಗಿದೆ ಎಂಬುದನ್ನು ನಿರ್ಧಾರ ಮಾಡಿ ಕೊಡಲಾಗಿದೆ. ಇದನ್ನು ಮೀರಿ ಒಂದಕ್ಕೆ ಮೂರರಷ್ಟು ಬೆಲೆಯನ್ನು ನಿರ್ಧಾರ ಮಾಡಿರುವಂಥದ್ದು ಕಾನೂನು ಬಾಹಿರವಲ್ಲವೆಂದು ಹೇಳಿರತಕ್ಕದ್ದು ನನಗೆ ಬಹಳ ಆಶ್ಚರ್ಯವಾಗುತ್ತಿದೆ. 1988-89ರಲ್ಲಿ ಮನೆಯ ಬೆಲೆ ನಿರ್ಧಾರ ಮಾಡುವಾಗಲೇನೆ ಇರತಕ್ಕ ಬೆಲೆಗೆ 15 ಪರ್‌ಸೆಂಟ್ ಎಸ್ಕೆಲೇಷನ್‌ನ್ನು ಟೆಂಡರ್‌ಗೆ ಸೇರಿಸಿಯೇ ಕೊಡಲಾಗಿತ್ತು. ಆದರೆ ಉತ್ತರದಲ್ಲಿ ಒಂದು ಆಶ್ಚರ್ಯ ಇದೆ. ಸದನದಲ್ಲಿ ಉತ್ತರವನ್ನು ನೀಡುವಾಗ ಲಿಖಿತ ಮಾಹಿತಿಯನ್ನು ಪಡೆದುಕೊಳ್ಳಬೇಕು. ಇವರು ಕೇವಲ ಹೆಬ್ಬಾಳು ಬಡಾವಣೆಯ ಬಗ್ಗೆ ಮಾತ್ರ ಮಾಹಿತಿಯನ್ನು ಕೊಟ್ಟಿದ್ದಾರೆ. ಇಡೀ ಮೈಸೂರು ನಗರಕ್ಕೆ ಸಂಬಂಧಪಟ್ಟಂತೆ ಆಶಾಮಂದಿರ ಮತ್ತು ಸ್ವಂತ ಮನೆಯನ್ನು ಹೊಂದಿ, ಯೋಜನೆಯಲ್ಲಿ 7126 ಮನೆಗಳಿಗೆ ಸಂಬಂಧಪಟ್ಟಂಥ ಯೋಜನೆಯ ಬಗ್ಗೆ ಕೇಳಿದ್ದೇನೆ. ಆದರೆ, ಉತ್ತರವನ್ನು ಕೊಟ್ಟಿರುವುದು ಕೇವಲ 971 ಮನೆಗಳ ಬಗ್ಗೆ ಮಾತ್ರ. 7134 ಮನೆಗಳನ್ನೇನು ನಿರ್ಮಾಣಮಾಡಿದ್ದಾರೆ, ಅಷ್ಟೂ ಮನೆಗಳಿಗೆ ಸಂಬಂಧಪಟ್ಟಂತೆ ಯಾವ ಬೆಲೆಯನ್ನು ನಿಗಧಿ ಮಾಡಲಾಗಿತ್ತೋ ಅದಕ್ಕೆ ವಿರುದ್ಧವಾಗಿ ಕಾನೂನುಬಾಹಿರವಾಗಿ ಹೆಚ್ಚಿನ ಹಣವನ್ನು ಹಾಕಿ ವಸೂಲಿ ಮಾಡುತ್ತಿರುವುದನ್ನು ದಾಖಲೆಗಳ ಸಮೇತ ತಮ್ಮ ಮುಂದಿಡುತ್ತಿದ್ದೇನೆ. 1987ರಲ್ಲಿ 15 ಸಾವಿರ ರೂಪಾಯಿಗಳಿಗೇನು ಮನೆಯ ಬೆಲೆಯನ್ನು ನಿಗಧಿ ಮಾಡಿದ್ದರೋ ಆ ಮನೆಗೆ ಸಂಬಂಧಪಟ್ಟಂತೆ, ಮತ್ತೆ ಬೆಲೆಯನ್ನು ನಿಗಧಿ ಮಾಡಿರುವುದರಲ್ಲಿ ಆಶ್ಚರ್ಯ ಉಂಟಾಗಿದೆ. ಒಂದೊಂದು ಸರ್ಕಾರಕ್ಕೆ ಒಂದೊಂದು ರೀತಿ ಬೆಲೆ ನಿಗಧಿ ಮಾಡುವುದು. 1982 ರಲ್ಲಿ ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದಂಥ ಸಮಯದಲ್ಲಿ ಒಂದು ಬೆಲೆಯನ್ನು ನಿಗಧಿ

ಮಾಡಿ ಫಲಾನುಭವಿಗಳಿಗೆ ನೋಟೀಸನ್ನು ಕೊಟ್ಟಿದ್ದರು. ಮನೆಯ ಅಂತಿಮವಾದ ಬೆಲೆ ಏನು ಎಂಬ ಬಗ್ಗೆ ನಿಶ್ಚಯ ಮಾಡಿದ್ದರು. ಜನತಾದಳ ಅಧಿಕಾರಕ್ಕೆ ಬಂದಮೇಲೆ ಮತ್ತೊಂದು ಅಂತಿಮ ಬೆಲೆಯನ್ನು ನಿರ್ಧಾರ ಮಾಡಲು ಅವಕಾಶವಿದೆಯೇ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:- ಇದು ಬಹಳ ಪ್ರಮುಖವಾಗಿದೆ. ಅಲ್ಲಿನ ಜನರು ನಮ್ಮ ಮೇಲೆ ಎಗರಿಬೀಳತಕ್ಕ ಪರಿಸ್ಥಿತಿ ಬಂದಿದೆ.

ಶ್ರೀ ಎ. ರಾಮದಾಸ್:- ಸದನಕ್ಕೆ ಉತ್ತರವನ್ನು ಹೇಳತಕ್ಕ ಸಮಯದಲ್ಲಿ ಮಾಹಿತಿಯನ್ನು ಮುಚ್ಚಿಡತಕ್ಕದ್ದು ಬಹಳ ನೋವಿನ ವಿಚಾರ. ಇಡೀ ಮೈಸೂರಿಗೆ ಸಂಬಂಧಪಟ್ಟಂತೆ 7134 ಮನೆಗಳಲ್ಲಿ 130 ಕೋಟಿ ರೂಪಾಯಿಗಳ ದೊಡ್ಡ ಹಗರಣ ನಡೆದಿರತಕ್ಕ ವಿಚಾರ ಇದು. ಇಂಥ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿರುವಂಥ ಸಂದರ್ಭದಲ್ಲಿ ಇಲ್ಲಿ ಕೇವಲ ಹೆಬ್ಬಾಳು ಬಡಾವಣೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕೊಟ್ಟು, ಯಾವುದೇ ರೀತಿಯಾದ ಅಕ್ರಮ ನಡೆದಿಲ್ಲವೆಂದು ಹೇಳತಕ್ಕದ್ದು ಆಶ್ಚರ್ಯಕರವಾದಂಥ ವಿಚಾರ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೆ, ನನ್ನ ಹತ್ತಿರ ಹೆಬ್ಬಾಳು ಬಡಾವಣೆಗೆ ಸಂಬಂಧಿಸಿದಂತೆ 921 ಮನೆಗಳ ಬಗ್ಗೆ ಮಾತ್ರ ಮಾಹಿತಿ ಇದೆ. ಮಾನ್ಯ ಸದಸ್ಯರು ತಿಳಿಸಿರುವಂತೆ ಆಶಾಮಂದಿರ ಯೋಜನೆ ಮತ್ತು ಸ್ವಂತ ಮನೆ ಹೊಂದಿ, ಯೋಜನೆಯಲ್ಲಿ ಕಟ್ಟಿಸಿರತಕ್ಕ 6500 ಮನೆಗಳು ಬೋಗಾದಿ, ಕ್ಯಾತಮಾರನಹಳ್ಳಿ ಮತ್ತು ಹೆಬ್ಬಾಳ ಈ ಮೂರು ಬಡಾವಣೆಗಳಲ್ಲಿ ಬರುತ್ತದೆ. ಈ ಮೂರೂ ಬಡಾವಣೆಗಳ ಬಗ್ಗೆ ಉತ್ತರ ನೀಡಬೇಕಾದರೆ, ಅದರ ಬಗ್ಗೆ ಇನ್ನು ಹೆಚ್ಚಿನ ಮಾಹಿತಿಯನ್ನು ತೆಗೆದುಕೊಂಡು ಸದನದಲ್ಲಿ ನೀಡುತ್ತೇವೆ. ಆದ್ದರಿಂದ ಇದರ ಬಗ್ಗೆ ಬೇರೆ ಸಮಯದಲ್ಲಿ ತೆಗೆದುಕೊಂಡರೆ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:- ಆ ಮನೆಯು ವಾಸಕ್ಕೆ ಯೋಗ್ಯವಾಗಿಲ್ಲ. ಅಂಥದರ ಮೇಲೆ ನೂರು ಪರ್‌ಸೆಂಟ್ ಹೆಚ್ಚು ಬೆಲೆಯನ್ನು ಹಾಕಿದ್ದಾರೆ. ನಾವು ಅಲ್ಲಿಗೆ ಹೋದರೆ ಜನರು ಕಲ್ಲಿನಿಂದ ಹೊಡೆಯುತ್ತಾರೆ. 120 ಪರ್‌ಸೆಂಟ್ ಹೆಚ್ಚಾಗಿದೆ. ನಾವೂ ಮೂರು ಸದಸ್ಯರು ಮೂಡಾ ಸಭೆಯಲ್ಲಿ ಸದಸ್ಯರಾಗಿದ್ದೇವೆ.

ಉಪಾಧ್ಯಕ್ಷರು:- ಅವರು ಎಲ್ಲಾ ಮಾಹಿತಿಯನ್ನು ತರಿಸಿಕೊಂಡು ಉತ್ತರಕೊಡುವುದಾಗಿ ಹೇಳಿದ್ದಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೆ, ನಾನು ಹೆಚ್ಚು ಮಾಹಿತಿಯನ್ನು ತರಿಸಿ ಅವರಿಗೆ ಉತ್ತರ ಕೊಡುವುದಾಗಿ ಹೇಳಿದ್ದೇವೆ. ತಾವು ನಾಳೆ, ನಾಡಿದ್ದು ಯಾವಾಗ ಇದರ ಬಗ್ಗೆ ಅವಕಾಶ ಕೊಡುತ್ತಿರೋ ಆಗ ಉತ್ತರ ಕೊಡುತ್ತೇನೆ. ಅವರು ಮೂಡಾದಲ್ಲಿ ಸದಸ್ಯರುಗಳಾಗಿದ್ದಾರೆ. ಅವರೂ ಸಹ ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ, ಏನು ಡಿಸೆಂಟ್ ನೋಟ್ ಹಾಕಿಲ್ಲ. ಎಲ್ಲದಕ್ಕೂ ಒಪ್ಪಿಗೆ ಕೊಟ್ಟಿದ್ದಾರೆ.

ಉಪಾಧ್ಯಕ್ಷರು:- ನಾಳೆ ಸಂಜೆಯೊಳಗೆ ಉತ್ತರವನ್ನು ಕೊಡಿ.

(ಗೊಂದಲ)

ಶ್ರೀ ಎ. ರಾಮದಾಸ್:- ಈ ಮಾತನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು. ನಾವು ಯಾವುದೇ ಕಾರಣಕ್ಕೂ ಅದಕ್ಕೆ ಒಪ್ಪಿಗೆ ಕೊಟ್ಟಿಲ್ಲ. ನಾವು ಮೂರು ಜನ ಸದಸ್ಯರು ಸಭೆಯಿಂದ ಎದ್ದು ಹೊರಕ್ಕೆ ಬಂದಮೇಲೆ ಅದಕ್ಕೆ ಒಪ್ಪಿಗೆಯನ್ನು ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಜೆಚ್.ಎಸ್. ಶಂಕರಲಿಂಗೇಗೌಡ:- ಜನರ ಮೇಲೆ ಚಪ್ಪರಿಯನ್ನು ಎಳೆಯತಕ್ಕ ಕೆಲಸವಾಗಿ ಮನೆಯನ್ನು ಕಟ್ಟಿ ಜಗರನ್ನು ಸಾಳು ಮಾಡುತ್ತಿದ್ದಾರೆ. ಅಪವಿತ್ರವಾದ ಕೆಲಸ ಮಾಡುತ್ತಿದ್ದಾರೆ. ಮೂಡಾ ಆಯುಕ್ತರು ಕಳೆದ ಎರಡು ಮೂರು ತಿಂಗಳ ಹಿಂದೆ ಜಗಳ ಮಾಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:- ನಾಳೆ ಸಂಜೆಯ ಒಳಗಾಗಿ ಉತ್ತರ ಕೊಡುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ. ಇಬ್ಬರೂ ನಿಂತು ಮಾತನಾಡಿದರೆ ಹೇಗೆ?

ಶ್ರೀ ಎ. ರಾಮದಾಸ್:- ಮಾನ್ಯ ಸಚಿವರು ಹೇಳಿರುವ ವಿಚಾರದ ಬಗ್ಗೆ ನಾನು ಹೇಳಲೇ ಬೇಕಾಗಿರುವ ವಿಚಾರವಿದೆ. ಇಲ್ಲಿ ಬಂದಿರುವ ಪ್ರಶ್ನೆ ಮತ್ತು ಅದಕ್ಕೆ ಕೊಟ್ಟಿರುವ ಮಾಹಿತಿಯ ಸ್ಪಕಾರ ನಮ್ಮ ಖಚಿತವಾದ ಉತ್ತರವೇನೆಂದರೆ, ಕಳೆದ ಬಾರಿ 21,762 ರೂ.ಗಳು ಮನೆಯನ್ನು ಕಟ್ಟುವುದಕ್ಕಾಗಿ ಎಂದು ಯಾವ ಎಲ್.ಐ.ಜಿ. 2ಕ್ಕೆ ನಿಗದಿ ಮಾಡಿದ್ದರೋ, ಅಲ್ಲಿ ಈಗಾಗಲೆ ಎಸ್ಕಲೇಷನ್‌ನ್ನು ಮಾಡಿ 30,593 ರೂಗಳನ್ನು ಮಾಡಿದ್ದಾರೆ. 1992ರಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಅಂತಿಮವಾದ ಬೆಲೆಯನ್ನು ನಿಗದಿ ಮಾಡಿ ನೋಟೀಸ್ ಕೊಡಲಾಗಿತ್ತು. ಈ ಸರ್ಕಾರ ಬಂದಮೇಲೆ ಮತ್ತೊಮ್ಮೆ ಅಂತಿಮ ಬೆಲೆಯನ್ನು ನಿರ್ಧಾರ ಮಾಡಿ, ಹಣವನ್ನು ಅಕ್ರಮವಾಗಿ ವಸೂಲಿ ಮಾಡುವಂಥ ವ್ಯವಸ್ಥೆ ಮಾಡಿದ್ದು 7129 ಮನೆಗಳ ಮೇಲೆ ಅಕ್ರಮವಾಗಿ ನಡೆಯುತ್ತಿದೆ. ನೋಟೀಸನ್ನು ಜಾರಿ ಮಾಡಿದ್ದಾರೆ, ಜನರಿಗೆ ಭಯವಾಗಿದೆ. ಹದಿನೈದು ದಿವಸಗಳಲ್ಲಿ ಹಣವನ್ನು ಕಟ್ಟದಿದ್ದರೆ ಆ ಮನೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದೆಂದು ನೋಟೀಸ್ ಜಾರಿ ಮಾಡಿದ್ದಾರೆ. ನೋಟೀಸ್ ಬಂದು ಒಂದು ವಾರ, ಹತ್ತು ದಿವಸಗಳಾಗಿದೆ. ಭಯದ ವಾತಾವರಣ ನಿರ್ಮಾಣವಾಗಿದೆ. ಇದು 45 ಕೋಟಿ ರೂಪಾಯಿಗಳ ಹಗರಣದ ವಿಚಾರ. 45 ಕೋಟಿ ರೂಪಾಯಿಗಳ ಟೆಂಡರನ್ನು ಕರೆದು ಮನೆಯನ್ನು ನಿರ್ಮಾಣ ಮಾಡುತ್ತೇವೆಂದು ಸರ್ಕಾರ ಯೋಜನೆಗೆ ಒಪ್ಪಿಗೆಯನ್ನು ಕೊಟ್ಟಿತ್ತು ಆದರೆ ಸುಮಾರು 130 ಕೋಟಿ ರೂಪಾಯಿಗಳನ್ನು ಜನರಿಂದ ವಸೂಲಿ ಮಾಡುತ್ತಿದ್ದಾರೆ. ಇದಕ್ಕೆ ನಾವು ಒಪ್ಪಿಗೆಯನ್ನು ಕೊಟ್ಟಿದ್ದೇವೆಂದು ಸಚಿವರು ಹೇಳಿದರು. ಆದರೆ ನಾವು ಯಾವುದೇ ಕಾರಣಕ್ಕೂ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಅಂದರೆ ದಾಖಲೆಗಳನ್ನು ತಿದ್ದಲಾಗಿದೆಯೆಂದು ಇಲ್ಲಿ ಸ್ಪಷ್ಟವಾಗಿದೆ. ಇಲ್ಲಿ ದಾಖಲೆಗಳನ್ನು ತಿದ್ದಲಾಗಿದೆಯೇ, ಇಲ್ಲವೇ ಎಂಬ ಬಗ್ಗೆ ದಯವಿಟ್ಟು ಹೇಳಬೇಕು.

ಶ್ರೀ ಬಿ.ಎಸ್. ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೆ, ತಮರು ಕೇಳಿರುವ ಎಲ್ಲಾ ವಿಚಾರಗಳ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನಾನು ಅಲ್ಲಿಂದ ತೆಗೆದುಕೊಳ್ಳುತ್ತೇನೆ. ನನ್ನ ಹತ್ತಿರ ಸದ್ಯಕ್ಕೆ ಹಿಪ್ಪ್ಪಳು ಬಡಾವಣೆಯಲ್ಲಿ ಕಟ್ಟಿರುವ ಮನೆಗಳ ಬಗ್ಗೆ ಮಾತ್ರ ಮಾಹಿತಿ ಇದೆ. ಬೋಗಾದಿ ಮತ್ತು ಕ್ಯಾತಮಾರನಹಳ್ಳಿ ಎಲ್ಲಾ ಸೇರಿ 6500 ಅಶಾಮಂದಿರದ ಮನೆಗಳಲ್ಲೇನು ಅವ್ಯವಹಾರವಾಗಿಯಿಯಂದು ಹೇಳಿದ್ದಾರೆ, ಮೂಡಾದಲ್ಲಿ ಕಾನೂನುಬಾಹಿರವಾಗಿ ನಡೆದಿದೆಯೆಂದು ಅವರೇನು ಹೇಳಿಸ್ಸಾರೆ ಅದರ ಬಗ್ಗೆ ಹೇಳುವುದಾದರೆ, ಆ ಮೂಡಾದ ಸದಸ್ಯರಲ್ಲಿ ಅವರೂ ಸೇರಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಶಂಕರಲಿಂಗೇಗೌಡ:- ಅವರಿಗೆ ಅಧಿಕಾರಿಗಳು ಕೊಟ್ಟಿರುವ ಮಾಹಿತಿ ಸರಿಯಾಗಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ತಾವು ಈ ರೀತಿ ಮಾತನಾಡಿದರೆ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಮುಚ್ಚಿಡತಕ್ಕ ಅಗತ್ಯವೇನೂ ಇಲ್ಲ. ಏನು ವಾಸ್ತವಿಕತೆ ಇದೆ ಅದನ್ನು ಸಭೆಯ ಮುಂದಿಡುತ್ತೇನೆ. ಇಲ್ಲಿ ಕಾನೂನುಬಾಹಿರವಾಗಿ ಏನೂ ಆಗಿಲ್ಲ. ಅವರೂ ಸದಸ್ಯರಾಗಿದ್ದಾರೆ. ಒಂದು ವೇಳೆ ಆ ರೀತಿ ಏನಾದರೂ ಮಾಹಿತಿ ಇದ್ದರೆ ಕೊಡಲಿ. ಸಮಗ್ರವಾಗಿ ಅದರ ಬಗ್ಗೆ ಪ್ರಸ್ತಾಪವಾಗಲಿ. ಇದರ ಬಗ್ಗೆ ಗುರುವಾರ ಚರ್ಚೆಗೆ ಇಟ್ಟುಕೊಳ್ಳಿ. ಮೈಸೂರಿನಿಂದ ಎಲ್ಲಾ ಮಾಹಿತಿಯನ್ನು ತರಿಸಿಕೊಳ್ಳಬೇಕು. ಸಮಯ ಬೇಕಾಗುತ್ತದೆ.

ಉಪಾಧ್ಯಕ್ಷರು:- ಮಾನ್ಯ ಸಚಿವರು ಇದರ ಬಗ್ಗೆ ಗುರುವಾರ ಉತ್ತರವನ್ನು ಕೊಡುತ್ತಾರೆ. ಇಲ್ಲಿಗೆ ಈ ಚರ್ಚೆ ಮುಕ್ತಾಯವಾಯಿತು. ಈಗ ಮಂಜುನಾಥಕುನ್ನೂರ್‌ರವರು ಮಾತನಾಡಿ.

ಉಪಾಧ್ಯಕ್ಷರು:- ಈಗ ಶ್ರೀಯುತರುಗಳಾದ ಡಿ.ಆರ್. ಪಾಟೀಲ್, ಕೆ.ಎಸ್. ಗದ್ದಿ ಹಾಗೂ ಮಂಜುನಾಥ ಸಿ. ಕುನ್ನೂರು ಅವರು - ರೈತರ ಜಮೀನಿನಲ್ಲಿ ವ್ಯವಸಾಯಕ್ಕೆ ತೊಂದರೆ ನೀಡುವ ಅದರೆ ಕೃಷಿ ಉಪಕರಣವನ್ನು ಮಾಡಲು ಉಪಯೋಗ ಬೀಳುವ ಕರಿ ಹಾಗೂ ಜಾಲಿ ಗಿಡಗಳನ್ನು ಕುರಿಯುವ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳ ಗಮನವನ್ನು ಸೆಳೆಯುವುದು.

ಶ್ರೀ ಎಂ.ಪಿ. ಪ್ರಕಾಶ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):- ಅರಣ್ಯ ಮಂತ್ರಿಗಳು ನೇಲ್ಮನವಿಯ ಕಲಾಪಗಳಲ್ಲಿ ಇರುವುದರಿಂದ ವರದಿಗಳನ್ನು ತರಿಸಿಕೊಂಡು ನಾಳೆ ಉತ್ತರವನ್ನು ಕೊಡುತ್ತೇವೆ.

ಉಪಾಧ್ಯಕ್ಷರು:- ಈಗ ಪಾಟೀಲ್ ನಾಗರಾಜ್‌ರವರು ರಾಜ್ಯಪಾಲರ ಭಾಷಣದ ಮೇಲಿನ ತಮ್ಮ ಭಾಷಣವನ್ನು ಮುಂದುವರೆಸಬೇಕು.